ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಸರ್ಕಾರ ತನ್ನದೆ ಆದ ಮಾನದಂಡವನ್ನು ಉಪಯೋಗಿಸಿದೆ. ಈ ನೇಮಕಾತಿಯ ಬಗ್ಗೆ ಸರ್ಕಾರಕ್ಕೆ ದೂರುಗಳು ಬಂದಿಲ್ಲ. ತಮ್ಮ ಗಮನಕ್ಕೆ ಬಂದಿದ್ದರೆ ತಿಳಿಸಿ ಅದರ ಬಗ್ಗೆ ತನಿಖೆ ಮಾಡಿಸುತ್ತೇನೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಕೆಲವು ಪಟ್ಟಣಗಳಲ್ಲಿ ಮತ್ತು ಹಳ್ಳಿಗಳಲ್ಲಿ ಮೂರು ತರಗತಿಗಳನ್ನು ಒಬ್ಬರೆ ಉಪಾಧ್ಯಾಯರು ನಡೆದುಕೊಂಡು ಹೋಗುತ್ತಿದಾದರೆ. ಇಷ್ಟು ಹುದ್ದೆಗಳು ಖಾಲಿ ಇದ್ದರೂ ಕೂಡ ಆ ಹುದ್ದೆಗಳನ್ನು ತುಂಬತಕ್ಕಂತಹ ದಿಕ್ಕಿನಲ್ಲಿ ಪ್ರಮುಖ ಪ್ರಯತ್ನವನ್ನು ಸರ್ಕಾರ ಮಾಡಲಿಲ್ಲ. ನಾವು ಶಿಕ್ಷಣಕ್ಕೆ ಆದ್ಯತೆ ಕೊಡುತ್ತೇವೆ, ಶಿಕ್ಷಣ ಬಹಳ ಮುಖ್ಯವಾಗಿ ಬೇಕು ಎನ್ನುವ ಮಾತನ್ನು ಹೇಳುತ್ತೀರಿ. ವಯಸ್ಕರ ಶಿಕ್ಷಣವನ್ನು ರದ್ದು ಮಾಡಿ ಇನ್ನೂರ ಜನ ಅಲ್ಲಿ ಒದ್ದಾಡುತ್ತಿದ್ದಾರೆ. ಅವರು 25 ವರ್ಷಗಳ ಶಿಕ್ಷಣವನ್ನು ಮಾಡಿದ್ದರೂ ಕೂಡ ಅವರ ಗೋಳಿನ ಕತೆಯನ್ನು ಹೇಳುವುದಕ್ಕಾಗುವುದಿಲ್ಲ...

ಅಧ್ಯಕ್ಷರು : ಶಂಕರ ಲಿಂಗೇಗೌಡರವರೆ, ತಮ್ಮ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ಪ್ರಸ್ತುತ ಖಾಲಿಯಿರತಕ್ಕಂಥ ಹುದ್ದೆಗಳನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ತುಂಬುತ್ತೇವೆಂದು ಖಚಿತವಾಗಿ ಹೇಳಿದ್ದಾರೆ, ಉತ್ತರ ಸರಿಯಾಗಿಯೇ ಇದೆ ನೋಡಿ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಉತ್ತರ ಸಮರ್ಪಕವಾಗಿಲ್ಲ.

ಅಧ್ಯಕ್ಷರು : ಸಮರ್ಪಕವಾಗಿ ಅಂದರೇನು? ಯಾವ ತಾರೀಖಿನಿಂದ ಮಾಡುತ್ತೇವೆಂದು ಹೇಳಬೇಕು.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ನೇಮಕಾತಿಯಲ್ಲಿ ಅರಾಜಕತೆ ನಡೆದಿದೆ, ವಯೋಮಿತಿಯನ್ನು ಅನುಸರಿಸಿಲ್ಲ, ಗ್ರೂಪ್‌ಗಳನ್ನು ತಿದ್ದುಪಡಿ ಮಾಡುವಾಗ ಅದರಲ್ಲಿ ಅವ್ಯವಹಾರ ನಡೆದಿದೆ ಎಂದು ಹೇಳಿದ್ದಾರೆ...

ಶ್ರೀ ಡಿ. ಮಂಜುನಾಥ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಅವ್ಯವಹಾರ ನಡೆದಿದೆ ಎಂದು ಅಪಾದನೆ ಮಾಡಿದ್ದಾರೆ. ನೀವು ನಿರ್ದಿಷ್ಟವಾದ ಪ್ರಕರಣವನ್ನು ಕೊಟ್ಟರೆ, ಅದರ ಬಗ್ಗೆ ತನಿಖೆ ಮಾಡಿಸುತ್ತೇನೆ.

ಅಧ್ಯಕ್ಷರು : ಜಯವಂತರವರೆ, ನಿಮ್ಮ 166(944)ನೇ ಪ್ರಶ್ನೆಯನ್ನು ತಡೆಹಿಡಿದಿದ್ದೇವೆ.

ತಾಲ್ಲೂಕು ಕೇಂದ್ರಗಳಲ್ಲಿ ಕ್ರೀಡಾಂಗಣಗಳ ನಿರ್ಮಾಣ ಕುರಿತು

1116 - ಡಾ|| ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಕ್ರೀಡಾಂಗಣ ನಿರ್ಮಿಸುವ ನಿರ್ಣಯ ಸರ್ಕಾರದ ಪರಿಶೀಲನೆಯಲ್ಲಿದೆಯೇ

ಆ) ಸರ್ಕಾರಿ ಸ್ವಾಮ್ಯದಲ್ಲಿ ಸರಿಯಾದ ನಿವೇಶನ ಇಲ್ಲದಿದ್ದಲ್ಲಿ ಸಾರ್ವಜನಿಕ ನಿವೇಶನದಲ್ಲಿ ಅನುಕೂಲ ಮಾಡಿಕೊಡಲು ಕ್ರಮ ಕೈಗೊಳ್ಳುವರೇ?

ಶ್ರೀ ಅಜಯಕುಮಾರ್ ಸರ್. ನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯಾ ಸಚಿವರು) :

ಅ) ಹೌದು

ಆ) ಸರ್ಕಾರಿ ಜಮೀನು ಇಲ್ಲದ ಸ್ಥಳಗಳಲ್ಲಿ ಸಾರ್ವಜನಿಕ ಜಮೀನನ್ನು ಇಲಾಖೆಗೆ ವರ್ಗಾವಣೆ ಮಾಡಿಕೊಂಡು ಸೂಕ್ತವಾಗಿದ್ದಲ್ಲಿ ಅಂತಹ ನಿವೇಶನದಲ್ಲಿ ಕ್ರೀಡಾಂಗಣ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗುವುದು.

ಡಾ॥ ಎಂ.ಪಿ. ಕರ್ಕಿ : ಸನ್ಮಾನ್ಯ ಸಭಾಧ್ಯಕ್ಷರೆ, ಉತ್ತರ ಕನ್ನಡ ಜಿಲ್ಲೆಯ ಕರಾವಳಿ ತಾಲ್ಲೂಕುಗಳಲ್ಲಿ ಸಮತಟ್ಟಾದ ಸ್ಥಳ ಸಿಗುವುದಿಲ್ಲ. ಅಂತಹ ಸ್ಥಳಗಳಲ್ಲಿ ಸಾರ್ವಜನಿಕರ ಉಪಯೋಗಕ್ಕೆ ಕ್ರೀಡಾಂಗಣಕ್ಕೆ ಉತ್ತೇಜನ ಕೊಡಬೇಕೆಂದು ತಾವು ಏನು ಯೋಜನೇಯನ್ನು ಹಾಕಿಕೊಂಡಿದ್ದೀರಿ, ಅಂಥ ಯೋಜನೆಗಳು ಉಪಯೋಗವಿಲ್ಲದಿರತಕ್ಕಂತಹವು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದಕ್ಕಾಗಿ ಸಾರ್ವಜನಿಕ ಸಂಸ್ಥೆಗಳಲ್ಲಿ ಅಂಥ ಸ್ಥಳವಿದ್ದರೆ ಅಲ್ಲಿ ಕ್ರೀಡಾಂಗಣಗಳನ್ನು ನಿರ್ಮಾಣ ಮಾಡುವುದಕ್ಕೆ ಆಗುತ್ತದೆಯೆ? ಸಾರ್ವಜನಿಕ ಸಂಸ್ಥೆಗಳ ಬೈಲಾಗಳಲ್ಲಿ ಸರ್ಕಾರಕ್ಕೆ ಹಸ್ತಾಂತರ ಮಾಡುವುದಕ್ಕೆ ಸ್ವಲ್ಪ ತೊಂದರೆಯಿದೆ. ಅಂತಹ ಸ್ಥಳಗಳನ್ನು ಪರಿಶೀಲಿಸಿ, ಆ ಸ್ಥಳಗಳಲ್ಲಿ ಈಗಿರತಕ್ಕಂತಹ ಕಾನೂನನ್ನು ಸ್ವಲ್ಪ ಬದಲಾಯಿಸಿಕೊಂಡು, ಕ್ರೀಡಾಂಗಣವನ್ನು ನಿರ್ಮಿಸಲು ಸರ್ಕಾರ ಯೋಚಿಸುತ್ತುದೆಯೆ? ಅದರ ನಿಯಂತ್ರಣಕ್ಕೆ ಆ ಕಮಿಟಿಯಲ್ಲಿ ಬೇಕಾದರೆ ಒಬ್ಬ ಅಧಿಕಾರಿಯನ್ನು ನೇಮಿಸಿ ಎಲ್ಲಾ ಸಾರ್ವಜನಿಕರಿಗೆ ಉಪಯೋಗವಾಗತಕ್ಕಂಥಹ ಕೆಲಸವನ್ನು ಸರ್ಕಾರ ಮಾಡಿಕೊಡುತ್ತಿದೆಯ.? ಆ ತಾಲ್ಲೂಕುಗಳಲ್ಲಿ ಸಾರ್ವಜನಿಕರಿಗೆ ಕ್ರೀಡಾಂಗಣಗಳ ಬಗ್ಗೆ ಸಹಕಾರ ಅಥವಾ ಸೌಲಭ್ಯ ನೀಡಲು ಸರ್ಕಾರ ಪ್ರವೃತ್ತವಾಗುತ್ತದೆಯೆ? ಎನ್ನುವ ಪ್ರಶ್ನೆ ಕೇಳುತ್ತಿದ್ದೇನೆ.

ಶ್ರೀ ಅಜಯಕುಮಾರ್ ಸರ್. ನಾಯಕ್ : ಸನ್ಮಾನ್ಯ ಸಭಾಪತಿಗಳೆ, ಯಾ[illegible] ತಾಲ್ಲೂಕುಗಳಲ್ಲಿ ನಮ್ಮ ಸರ್ಕಾರ ಜಮೀನು ಲಭ್ಯವಿರುವುದಿಲ್ಲ ಅಂತಹ ತಾಲ್ಲೂಕುಗಳ[illegible] ಖಾಸಗಿ ಸಂಸ್ಥೆಗಳ ಸ್ಥಳವಿದ್ದರೆ ವಿದ್ಯಾ ಸಂಸ್ಥೆಗಳ ಸ್ಥಳವಿದ್ದರೆ ಆ ಸ್ಥಳವನ್ನು ನಮ್ಮ ಇಲಾಖೆಗೆ ಹಸ್ತಾಂತರ ಮಾಡಿಕೊಂಡು ಅಂಥ ಸ್ಥಳಗಳಲ್ಲಿ ತಾಲ್ಲೂಕು ಕ್ರೀಡಾಂಗಣವನ್ನು ನಿರ್ಮಾಣ ಮಾಡಲಿಕ್ಕೆ ಸಿದ್ಧವಿದ್ದೇವೆ.

ಡಾ॥ ಎಂ.ಪಿ. ಕರ್ಕಿ : ಮಾನ್ಯ ಅಧ್ಯಕ್ಷರೆ, ನಾನು ಹೇಳತಕ್ಕಂತದ್ದು ಸಾರ್ವಜನಿಕ ಸಂಸ್ಥೆಗಳ ಬೈಲಾಗಳಲ್ಲಿ ಹಸ್ತಾಂತರ ಮಾಡುವುದಕ್ಕೆ ಅವಕಾಶವಿರುವುದಿಲ್ಲ.

ಶ್ರೀ ಅಜಯಕುಮಾರ್ ಸರ್. ನಾಯಕ್ : ಸಾಕಷ್ಟು ಕಡೆ ಹಾಗೇ ಕೆಲಸ ಮಾಡಿದ್ದೇವೆ. ಸಾಕಷ್ಟು ಕಡೆ ಸರ್ಕಾರಿ ಜಮೀನಿಲ್ಲ. ಖಾಸಗಿ ಸಂಸ್ಥೆಗಳು ತಮ್ಮಲ್ಲಿರತಕ್ಕಂತಹ ಜಾಗವನ್ನು ಸರ್ಕಾರಕ್ಕೆ ಹಸ್ತಾಂತರ ಮಾಡಿದಲ್ಲಿ ತಾಲ್ಲೂಕು ಕ್ರೀಡಾಂಗಣಗಳ ಕೆಲಸವನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಡಾ॥ ಎಂ,ಪಿ, ಕರ್ಕಿ : ಅಧ್ಯಕ್ಷರೆ, ಮೂಲವಾಗಿರುವುದು ಕ್ರೀಡೆಗೆ ಉತ್ತೇಜನ ಕೊಡತಕ್ಕಂತದ್ದು. ಸರ್ಕಾರವೇ ಮಾಡಬೇಕು ಎನ್ನತಕ್ಕಂಥಹ ನಿಯಮವೇನಿಲ್ಲ, ಸರ್ಕಾರದ ಜಾಗದಲ್ಲೇ ಮಾಡಬೇಕೆಂದು ನಿಯಮವೇನಿಲ್ಲ. ನಿಯಮಕ್ಕೆ ಒಂದು ತಿದ್ದುಪಡಿಯನ್ನು ತಂದು ಎಲ್ಲಿ ಸಾಧ್ಯವೋ ಅಲ್ಲಿಮಾಡಿ. ಎಲ್ಲಿ ಸಹಕಾರ ಸಂಸ್ಥೆಗಳು, ಸಾರ್ವಜನಿಕ ಸಂಸ್ಥೆಗಳಿರತಕ್ಕಂತಹ ಜಾಗದಲ್ಲಿ ಕೊಡುವುದಕ್ಕೋಸ್ಕರ, ಒಂದು ಸಣ್ಣ ತಿದ್ದುಪಡಿ ತಂದರೆ ಜನಕ್ಕೆ ಅನುಕೂಲವಾಗುತ್ತದೆ ಹಾಗೂ ಪ್ರಯೋಜನವಾಗುತ್ತದೆ ಎನ್ನತಕ್ಕ ಮಾತನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು : ಇದು ಒಳ್ಳೆಯ ಸಲಹೆ.

ಶ್ರೀ ಅಜಯಕುಮಾರ್ ಸರ್. ನಾಯಕ್ : ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ.

(ಪ್ರಶ್ನೆ ಸಂಖ್ಯೆ : 168(904) (ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)